



ಉಂಗುರದಲ್ಲಿ ಕನ್ನಡಿ ಅಳವಡಿಸಲಾಗಿರುವ ಈ ವಿಶಿಷ್ಟ ಆಭರಣ 'ಮಿರರ್ ರಿಂಗ್' ಎಂದೇ ಖ್ಯಾತಿಯಾಗಿದ್ದು, ಫ್ಯಾಷನ್ ಟ್ರೆಂಡ್ ಎನಿಸಿದೆ.

■ ಆಶಾ ಎಸ್. ಕುಲಕರ್ಣಿ



# ಉಂಗುರದಲ್ಲಿ ಕನ್ನಡಿ ಸೌಂದರ್ಯಕ್ಕೆ ಮುನ್ನುಡಿ!



ಬೆರಳ ಸುತ್ತಿನ ಬ್ಯಾಂಡ್‌ನಂತಿರುವ ಒಡವೆಯೇ ಉಂಗುರ. ಬೆರಳನ್ನು ಅಲಂಕರಿಸುವ ಉಂಗುರ ಚಿನ್ನದಿಂದಲೂ, ಹರಳುಗಳಿಂದ ಕೂಡಿರುವಂಥದ್ದೂ ಆಗಿದ್ದು ಬೆರಳಿನ ಮೆರುಗನ್ನು ಹೆಚ್ಚಿಸುತ್ತದೆ. ಈಗ ಚಿನ್ನ, ವಜ್ರ ಮಾತ್ರವಲ್ಲದೆ ಬೆಳ್ಳಿ, ಇತರ ಲೋಹಗಳಿಂದ ಮಾಡಿದ ಉಂಗುರಗಳೂ ಜನಪ್ರಿಯವೇ. ಇವೆಲ್ಲವನ್ನೂ ಬದಿಗೊತ್ತಿ ಫ್ಯಾಷನಬಲ್ ಆಗಿರುವ ಹೊಸ ಮಾದರಿಯ ಉಂಗುರ ಮಾರುಕಟ್ಟೆಗೆ ಬಂದಿದೆ. ಉಂಗುರದಲ್ಲಿ ಕನ್ನಡಿ ಅಳವಡಿಸಲಾಗಿರುವ ಈ ವಿಶಿಷ್ಟ ಆಭರಣ 'ಮಿರರ್ ರಿಂಗ್' ಎಂದೇ ಖ್ಯಾತಿ.

ಹಿಂದಿನ ಕಾಲದಲ್ಲಿ ಉಂಗುರಗಳನ್ನು ಶುಭ ಸಮಾರಂಭಗಳಲ್ಲಿ, ಹಬ್ಬ ಹರಿದಿನಗಳಲ್ಲಿ ಧರಿಸುವ ಸಂಪ್ರದಾಯ ಇತ್ತು. ಅಲ್ಲದೆ ಉಂಗುರಗಳನ್ನು ಬೆಳ್ಳಿ, ಬಂಗಾರ ಹಾಗೂ ವಜ್ರಗಳಿಂದ ತಯಾರಿಸಲಾಗುತ್ತಿತ್ತು. ಈ ಆಭರಣಗಳನ್ನು ಧರಿಸುವುದರಿಂದ ಹೆಣ್ಣು ಸುಂದರಿಯಾಗಿ ಕಾಣುತ್ತಿದ್ದಳು. ಜೊತೆಗೆ ಜ್ಯೋತಿಷ್ಯದ ಪ್ರಕಾರ ಇಂಥ ಉಂಗುರಗಳಿಂದ ಆರೋಗ್ಯ ಲಾಭ ಇದೆ ಎಂದೂ ಮನಗಂಡಿದ್ದರು. ಮಹಿಳೆಯರು ಯಾವಾಗಲೂ ತಮ್ಮ ಎಡಗೈಯಲ್ಲಿ ಬೆಳ್ಳಿಯ ಉಂಗುರವನ್ನು ಧರಿಸುವುದರಿಂದ ಧನ ಹಾಗೂ ಸಂಪತ್ತು ವೃದ್ಧಿಯಾಗುತ್ತದೆ ಎನ್ನುವ ನಂಬಿಕೆ ಕೂಡ ಇದೆ.

ಉಂಗುರದ ಮೇಲೆ ಒಬ್ಬರ ಹೆಸರನ್ನು ಕೆತ್ತುವ ವಿಧಾನವು ರಾಮಾಯಣ ಕಾಲದಿಂದಲೂ ಚಾಲ್ತಿಯಲ್ಲಿದೆ. ಹಿಂದಿನ ಕಾಲದಲ್ಲಿ, ರಾಜರು ಹಾಗೂ